ಶ್ರೀ ಸಿ. ಎಸ್. ಹುಲ್ಕೋಟಿ.—ತೀರನಹಳ್ಳಿ ಗಾವುದ ಬಗ್ಗೆ ಹೆರ್ತ್ ಇಲಾಖೆಗೆ ಹೋಗಿ ಬಹಳ ದಿವಸವಾಯಿತು, ಇನ್ನೂ ಅವರು ಕಳುಹಿಸಿಲ್ಲ, ತೀರ್ಮಾನಿಸುತ್ತೀರಾ ?

† ಶ್ರೀ ಎಂ. ವಿ. ಕೃಷ್ಣಪ್ಪ.—ತೀರ್ಮಾನ ಪಡಿಸುತ್ತಿದ್ದೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಜಾಗ್ರತೆ ಮಾಡದಿರುವುದರಿಂದ ಜನರಿಗೆ ಬಹಳ ತೊಂದರೆ ಯಾಗುತ್ತಿದೆ ಎಂಬುದು ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಜ, ಆದರೆ ಇದನ್ನು ತುಂಗಭದ್ರಾ ಬೋರ್ಡಿನವರು ತೀರ್ಮಾನ ಮಾಡಬೇಕು, ಅವರು ಒಪ್ಪಬೇಕು. ಆ ಪ್ರದೇಶ ಅವರಿಗೆ ಸಂಬಂಧಪಟ್ಟದಾದುದರಿಂದ ಸ್ವಲ್ಪ ತಡವಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಇದರಲ್ಲಿ ಕಕ್ಕೂರು ಗ್ರಾಮವನ್ನು ಬೇರೆ ಕಡೆ ವರ್ಗಾಯಿಸುವ ವಿಚಾರ ತುಂಗಭದ್ರಾ ಬೋರ್ಡಿನ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಈ ದೃಷ್ಟಿಯಿಂದ ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಗ ಮಾಡಿ ಎಂದು ನಾವು ಬರೆದಿದ್ದೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಮೂರು ಗ್ರಾಮಗಳ ಸರ್ವೆ ಕೆಲಸ ಬಹಳ ದಿನಗಳಿಂದ ತಡವಾಗಿದೆಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಗ ಮುಗಿಸಿ ಎಂದು ಬರೆಯುತ್ತಿದ್ದೇವೆ.

Sri G. V. GOWDA.—Part of the village of Keralahalli is asked to be vacated. What about it ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಭಾಗವನ್ನು ಬೇರೆ ಕಡೆ ವರ್ಗಾಯಿಸುವುದಕ್ಕೆ ತುಂಗಭದ್ರಾ ಬೋರ್ಡಿಗೆ ಬರೆದಿದ್ದೇವೆ.

ಶ್ರೀ ಜಿ. ವಿ. ಗೌಡ.—ಅವರು ಏನು ತೀರ್ಮಾನ ಮಾಡಿದರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇನ್ನೂ ತೀರ್ಮಾನ ಮಾಡಿಲ್ಲ, ಅವರ ತೀರ್ಮಾನ ಗೊತ್ತಾದ ತಕ್ಷಣ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಆ ಭಾಗದ ಜನರಿಗೆ ಬಹಳ ತೊಂದರೆಯಾಗುತ್ತಿದೆಯಾದ ಕಾರಣ ತೀವ್ರ ಕೆಲಸವಾಗುವುದಕ್ಕೆ ಬೋರ್ಡಿನವರಿಗೆ ಒತ್ತಾಯಪಡಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವೂ ಹೇಳುತ್ತಿದ್ದೀರಿ, ನಾವೂ ಒತ್ತಾಯಪಡಿಸುತ್ತಿದ್ದೇವೆ, ಅವರು ಬೇಗ ಮಾಡಬೇಕು.

ಶ್ರೀ ಸಿ. ಎಸ್. ಹುಲ್ಕೋಟಿ.—ಪ್ಲಾಟ್ಸ ಹಂಚುವುದರಲ್ಲಿ ಡಿಲೇ ಆಗಿ ಜನರಿಗೆ ತೊಂದರೆಯಾಗಿದೆಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಧಾನ ಮಾಡಬಾರದಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಮಳೆಗಾಲದಲ್ಲಿ ನದಿಗೆ ಹೆಚ್ಚು ನೀರು ಬಂದು ಗಂಗಾಪುರ ಹಳ್ಳಿಯು ಮುಳುಗಡೆಯಾಗುತ್ತದೆ ಎಂಬುದಕ್ಕೆ ತೀವ್ರ ರಿಪೋರ್ಟ್ ತರಿಸಿ ಆ ಹಳ್ಳಿಯನ್ನು ಸ್ಥಳಾಂತರ ಮಾಡಲು ಪರವಾನಿಗೆ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು.

---

## Fresh Minor Irrigation Projects sanctioned uringd 1961-65 in Channarayapatna Taluk.

*Q.—656. Sri S. SIVAPPA (Sravanabelagola).—

Will the Government be pleased to state :—

(a) the number of fresh Minor Irrigation Projects sanctioned during the year 1964-65 in Channarayapatna Taluk ;

(b) what are the costs of each Project ;

(c) what is the progress of work up-to-date ?

A.—Sri ALUR HANUMANTHAPPA (Deputy Minister for Minor Irrigation).—

(*a*) Nil.

(*b*) and (*c*) Do not arise in view of reply to clause (*a*).

ಶ್ರೀ ಎಸ್. ಶಿವಪ್ಪ.—ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 1964-65ರಲ್ಲಿ ಹೊಸ ಮೈನರ್ ಇರಿಗೇಶನ್ ಪ್ರೊಜೆಕ್ಟ್ಸ್ ಸ್ಯಾಂಕ್ಷನ್ ಮಾಡಿದ್ದೀರಾ ಎಂದು ಪ್ರಶ್ನೆ ಕೇಳಿದ್ದಕ್ಕೆ ಇಲ್ಲಾ ಎಂದು ಉತ್ತರ ಹೇಳಿದೆ. ಸರಕಾರದ ಕೃಪಾ ದೃಷ್ಟಿ ಚನ್ನರಾಯಪಟ್ಟಣದ ಮೇಲೆ ಏತಕ್ಕೆ ಬೀಳಲಿಲ್ಲ, ಸ್ವಾಮಿ?

† ಶ್ರೀ ಆಲೂರು ಹನುಮಂತಪ್ಪ.—ಹೊಸ ಕೆಲಸ 1964-65ರಲ್ಲಿ ಯಾವುದೂ ಮಂಜೂರು ಮಾಡಿಲ್ಲ. ಹೆಚ್ಚು ಹಣ ಕೊಡಿ ಎಂದು ಕೇಂದ್ರ ಸರಕಾರವನ್ನು ಕೇಳುತ್ತಿದ್ದೇವೆ. ನಿನ್ನೆಯ ದಿನ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳವರು ಸಭೆಗೆ ಭರವಸೆ ಕೊಟ್ಟಿದ್ದಾರೆ. ಸ್ಕೇರ್ಸಿಟಿ ವರ್ಕ್ಸ್ ಮಾಡಿಸಬೇಕೆಂದು ಇದ್ದೇವೆ.

ಶ್ರೀ ಎಸ್. ಶಿವಪ್ಪ.—ಅನೇಕ ಮೈನರ್ ಇರಿಗೇಶನ್ ಪ್ರೊಜೆಕ್ಟುಗಳ ಎಸ್ಟಿಮೇಟು ಸರಕಾರದ ಮುಂದೆ ಈಗ ಇವೆ ಅಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ಬೇಕಾದಷ್ಟು ಇವೆ. 18 ಕೋಟಿ ರೂಪಾಯಿ ಎಸ್ಟಿಮೇಟು ಇವೆ.

ಶ್ರೀ ಎಸ್. ಶಿವಪ್ಪ.—ಈ ಕೆಲಸ ಮುಂಜೂರು ಮಾಡುತ್ತೇವೆಂದು ಭರವಸೆ ಕೊಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಹಣದ ಅಭಾವ ಇದೆ. ಹಣ ಕೊಡಬೇಕೆಂದು ಕೇಂದ್ರ ಸರಕಾರವನ್ನು ಕೇಳುತ್ತಿದ್ದೇವೆ.

Sri G. V. GOWDA.—May I know if investigations have been done as to the feasibility of minor projects and estimates prepared?

Sri ALUR HANUMANTHAPPA.—Estimmates for 1044 projects are ready and they would cost 18 crores. We need not wait for scrutiny of of these estimates.

ಶ್ರೀ ಆರ್. ಎನ್ ಲಕ್ಷ್ಮೀಪತಿ.—ಈ ನಲ ಮುಳೆ ಇಲ್ಲದೆ ಕ್ಷಾಮ ಇದೆ. ಬೇರೆ ಇಲಾಖೆ ಕೆಲಸ ನಿಲ್ಲಿಸಿಬಿಟ್ಟು ಕೆರೆಗಳ ಕೆಲಸಕ್ಕೆ ಹಣ ಒದಗಿಸಿ ಕೆರೆಗಳ ಕೆಲಸ ನಿಲ್ಲದಂತೆ ಮಾಡುವುದು ಒಳ್ಳೆಯದಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ಕೆಲಸ ನಿಲ್ಲಿಸುವ ಪ್ರಶ್ನೆ ಇಲ್ಲ. ಎಲ್ಲಾ ಕೆಲಸಗಳೂ ಪ್ರಾಮುಖ್ಯವಾದುವು. ಅದರಲ್ಲಿಯೂ ನೀರಾವರಿ ಕೆಲಸ ಬಹಳ ಪ್ರಾಮುಖ್ಯವಾದುದು ನೀರಾವರಿ ಕೆಲಸ ತಗೆದುಕೊಳ್ಳುವ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಈ ವರ್ಷ ಎಷ್ಟು ಕೆಲಸ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡೋಣ ಎಂದು ಅವರು ಹೇಳಿದ್ದಾರೆ. ಹಾಗೆಯೇ ಮಾಡುತ್ತೇವೆ.

Sri G. V. GOWDA.—Are the 1,044 works which have been estimated confined to a particular area or are they distributed throughout the State.

Sri ALUR HANUMANTHAPPA.—The works are distributed all over the State.

ಶ್ರೀ ಎನ್. ನಂಜೇಗೌಡ.— ಕೆರೆಗಳ ರಿಪೇರಿ ಕೆಲಸ ಎಷ್ಟು ಪೆಂಡಿಂಗ್ ಇವೆ?

ಶ್ರೀ ಆಲೂರು ಹನುಮಂತಪ್ಪ.—ಪೆಂಡಿಂಗ್ ವರ್ಕ್ಸ್ ಮಾಡಬೇಕಾಗುತ್ತದೆ. ಸೀಮೆಂಟ್ ಕೊರತೆ ಜೊತೆಗೆ ಹಣ ಒದಗಿಸಬೇಕಾಗಿದೆ. ತೀವ್ರ ಗಮನಕೊಟ್ಟು ಆದಷ್ಟು ಜಾಗ್ರತೆ ಕೆಲಸ ಮಾಡಿಸಬೇಕೆಂದು ಇದ್ದೇವೆ. ಫಿಜಿಕಲ್ ಅಚೀವ್‌ಮೆಂಟ್ ಗುರಿ ಮುಟ್ಟುತ್ತೇವೆ.

ಶ್ರೀ ಎಸ್. ಶಿವಪ್ಪ.—ದುರ್ಭಿಕ್ಷ ಕ್ಷೇತ್ರದಲ್ಲಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಮಂತ್ರಿಗಳು ಉತ್ತರ ಹೇಳಿದರು. ಬಜೆಟ್ಟಿನಲ್ಲಿ ಸಣ್ಣ ನೀರಾವರಿಗಾಗಿ ಬಹಳ ಕಡಿಮೆ ಹಣ ಪ್ರೊವೈಡ್ ಮಾಡಿದೆಯಲ್ಲವೇ! ಈಗ ಎಷ್ಟು ಪ್ರೊವೈಡ್ ಮಾಡುತ್ತೀರಿ?

ಶ್ರೀ ಆಲೂರು ಹನುಮಂತಪ್ಪ.—ಹಣ ಕಡಿಮೆ ಒದಗಿಸಿದೆ ಎಂಬುದು ನಿಜ. ಆದರೆ ಇದಕ್ಕೆ ಹೆಚ್ಚು ಹಣ ಒದಗಿಸಬೇಕೆಂದು ಇದ್ದೇವೆ.

ಶ್ರೀ ಎನ್. ನಂಜೇಗೌಡ.—ಪೆಂಡಿಂಗ್ ವರ್ಕ್ಸ್ ಮುಗಿಸಬೇಕಾದರೆ ಎಷ್ಟು ಕೋಟಿ ರೂಪಾಯಿ ಬೇಕಾಗುತ್ತದೆ?

ಶ್ರೀ ಆಲೂರು ಹನುಮಂತಪ್ಪ.—ಹದಿನೈದು ಹದಿನಾರು ಕೋಟಿ ಬೇಕಾಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ನಣ್ಣ ನೀರಾವರಿ ಯೋಜನೆ ತೆಗೆದುಕೊಳ್ಳುವಾಗ್ಗೆ ಅಲ್ಲಿಯ ಭೂಗುಣ, ನೀರಿನ ಸೌಕರ್ಯ ವನೆತಿ ಸೌಕರ್ಯ ಹೇಗೆ ಸಿಕ್ಕುತ್ತದೆ ಎಂಬುದನ್ನು ನೋಡಿಕೊಂಡು ಸಂಬಂಧಪಟ್ಟ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಎಲ್ಲಾ ಕಡೆಗೆ ಪಂಪು ಸೆಟ್ಟು ಕೊಡಬೇಕು, ಪಿಕ್ ಅಪ್ ಮಾಡಬೇಕು, ಕೆರೆ ಮಾಡಬೇಕು ಎಂದು ಆದೇಶ ಕೊಟ್ಟಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ನಣ್ಣ ನೀರಾವರಿಗೆ 18 ಕೋಟಿ ರೂಪಾಯಿ ಅಲ್ಲದೆ ಮಾಸ್ಟರ್ ಪ್ಲಾನಕ್ಕೆ 150 ಕೋಟಿ ಬೇಕಾಗುವುದು. ಇದರಿಂದ 13 ಲಕ್ಷ ಎಕರೆ ಭೂಮಿ ನೀರಾವರಿಗೆ ಬರತಕ್ಕಂಥಾದ್ದು ಎಂದು ಎಸ್ಟಿಮೇಟು ಮಾಡಿ ಯೋಜನೆ ತಯಾರಾಗುತ್ತಾ ಇದೆ. The Minor Irrigation Department has prepared a master plan costing 150 crores to irrigate 13 lakhs acres, that is, 10 per cent inerease in the present potential.

Sri G. V. GOWDA—.How many works does the master plan contain and when will it be finalised.

Sri ALUR HANUMANTHAPPA.—It will consist of 18,000 works.

ಶ್ರೀ ಎಚ್. ಆರ್. ಕೇಶವಮೂರ್ತಿ.—ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಅಣತಿಕೆರೆ ಎಂಬುದು ಹಾನನ ಜಿಲ್ಲೆಯಲ್ಲಿ ಹೆಸರಾದದ್ದು ಇದೆ. ಈ ಕೆರೆಯ ಎಸ್ಟಿಮೇಟು ತಯಾರಾಗಿ ಒಂದು ವರ್ಷದಿಂದ ಪೆಂಡಿಂಗ್ ಇದೆ. ರೆಸ್ಪೋರೇಶನ್ ಕೆಲಸಮಾಡಿಲ್ಲ. ಕೇಳಿದರೆ ದುಡ್ಡು ಇರ್ಲಾ ಎಂದು ಹೇಳುತ್ತೀರಿ. ಈ ಪೆಂಡಿಂಗ್ ಕೆಲಸ ಮಾಡಿಸುತ್ತೀರಾ ? ಇದಕ್ಕೆ ಏನು ಆದೇಶ ಕೊಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಇದು ಮಾನ್ಯ ನದಸ್ಯರಿಗೆ ಗೊತ್ತಿದೆ. ಅನೇಕ ಕೆಲಸ ಪ್ರಾರಂಭ ಮಾಡಿದ್ದೇವೆ. ಆದರೆ ಕಂಪ್ಲೀಟ್ ಆಗಿಲ್ಲ. ತೆಗೆದು ಕೊಂಡ ಕೆಲಸ ಪೂರ್ತಿ ಮಾಡಬೇಕಾಗಿದೆ. ಪ್ರಾರಂಭ ಮಾಡಿದ ಕೆಲಸ ಪೂರ್ತಿ ಮಾಡುವುದರಿಂದ ಜನರಿಗೆ ಅನುಕೂಲವಾಗುತ್ತದೆ. ಇದಕ್ಕೆ ಹೆಚ್ಚು ಗಮನ ಕೊಟ್ಟಿದ್ದೇವೆ. ಕೆಲಸ ಪೂರ್ತಿಯಾಗುವ ವರೆಗೆ ಹೊಸ ಕೆಲಸ ತೆಗೆದುಕೊಂಡು ಎಲ್ಲಿ ಮಾಡಲು ಸಾಧ್ಯವಿದೆ ಅಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಎಸ್ಟಿಮೇಟು ಮಾಡಿದ ಪ್ರಕಾರ 17-18 ಕೋಟಿ ರೂಪಾಯಿ ಎಸ್ಟಿಮೇಟು ಮಾಡಿದ್ದಾರೆ.

Sri S. SIVAPPA.—Has it come to the notice of Government that even the half-done works have been stopped because of scarcity of cement in several parts of the State.

Sri VEERENDRA PATIL.—I do not think that position is correct. There was some shortage of cement for a short period but the works have not been stopped.

Sri S. SIVAPPA.—When I asked the Engineers in my constituency they said that they havs stopped the works for want of cement. If that is a fact, will Government take steps to see that cement is supplied to these minor irrigation projects immediately ?

Sri ALUR HANUMANTHAPPA.—We are taking steps to see that adequate cement is supplied and that theae works which are in progress are completed as early as possible.

Mr. SPEAKER.—The best thing is for the hon'ble member to give a list of such works to Government either directly or through me and they will be attended to.

ಶ್ರೀ ಎಚ್. ಆರ್. ಕೇಶವಮೂರ್ತಿ.—ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಅಣತೆ ಕೆರೆ. ಹಾನನ ಡಿಸ್ಟ್ರಿಕ್ಟಿನಲ್ಲಿಯೆ ದೊಡ್ಡ ಕೆರೆ. ಅದರ ಎಸ್ಟಿಮೇಟನ್ನು ಹಾಗೆಯೇ ಬದಗಿಟ್ಟಿದ್ದಾರೆ. ಇನ್‌ಫ್ಲೊಯನ್ಸ್ ಪಾರ್ಟ ಪ್ಲೆ ಮಾಡುತ್ತಿದೆಯೋ ಅಥವಾ ಅಗತ್ಯತೆ ಪಾರ್ಟ ಪ್ಲೆ ಮಾಡುತ್ತಿದೆಯೋ?

ಶ್ರೀ ಆಲೂರು ಹನುಮಂತಪ್ಪ.—ಎಸ್ಟಿಮೇಟು ತರಿಸಿ ಸ್ಕ್ರುಟಿನಿ ಮಾಡಿ ನೋಡೋಣ.

ಶ್ರೀ ಎಸ್. ಗೋಪಾಲಗೌಡ.—ಈಗ ನೀರಾವರಿ ಮಂತ್ರಿಗಳ ಖಾತೆಗೆ ಸಂಬಂಧ ಪಟ್ಟ ಪ್ರಶ್ನೆಯನ್ನು ಉತ್ತರಿಸುತ್ತಾ, ಲೋಕೋಪಯೋಗಿ ಶಾಖೆಯ ಮಂತ್ರಿಗಳು, ಎಷ್ಟೋ ಕವಿಟ್ ಮಾಡಿಕೊಂಡು ಬಿಟ್ಟಿದ್ದೇವೆ. ಅವುಗಳನ್ನೆಲ್ಲಾ ಮುಗಿಸದೆ ಸುಮ್ಮನೆ ಎಸ್ಟಿಮೇಟ್ ಮಾಡಿದರೆ ಏನು ಪ್ರಯೋ

ಜನ ಎಂದು ಅರ್ಥ ಬರುವ ಹಾಗೆ ಹೇಳಿದರು. ಅದರ ಅರ್ಥ ನಾರಾಯಣಪುರ-ಆಲಮಟ್ಟಿ ದೊಡ್ಡ ಯೋಜನೆಗಳನ್ನು ಮಾಡುವುದಕ್ಕೆ ಮುದ್ದನ್ನು ಉಪಯೋಗಿಸಬೇಕಾಗುತ್ತದೆ, ಸಣ್ಣ ನೀರಾವರಿಗೆ ಹೆಚ್ಚು ಮಾಡುವುದಕ್ಕಾಗುವುದಿಲ್ಲ ಎಂದು ಸರ್ಕಾರದ ಉದ್ದೇಶವೊ ಹೇಗೆ, ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರ ಊಹೆ ಬಹಳ ದೊಡ್ಡದು ಅನ್ಸ್ತೇ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸಣ್ಣಪುಟ್ಟ ಅಧಿಕಾರಿಗಳು ಫೈಲುಗಳನ್ನು ಮೇಲಕ್ಕೆ ಕಳಕ್ಕೆ ಓಡಾಡಿಸುತ್ತಾ ಸ್ಪಿಲ್ ಓವರ್ ವರ್ಕುಗಳನ್ನು ಬಹಳ ಜಾಸ್ತಿ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಸ್ವಲ್ಪ ಜಾಗರೂಕರಾಗಿರುವುದಕ್ಕೆ ಅಧಿಕಾರಿಗಳಿಗೆ ಆದೇಶ ಕೊಡುತ್ತೀರ?

ಶ್ರೀ ಆಲೂರು ಹನುಮಂತಪ್ಪ.—ಸ್ಪಿಲ್ ಓವರ್ ವರ್ಕ್ಸ್ ಅಯಾವರ್ಷದ್ದು ಸಾರ್ಟ್ ಔಟ್ ಮಾಡಿ ಅಯಾ ಸಾಲಿನ ಹಣ ಒದಗಿಸಿ ಕೆಲಸವನ್ನು ಮುಗಿಸಬೇಕೆಂದು ಆದೇಶ ಕೊಟ್ಟಿದ್ದೇವೆ, ಅವು ನಿಧಾನ ವಾಗುತ್ತವೆ ಎಂಬ ಯಾವ ಅನುಮಾನವನ್ನು ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ಸಣ್ಣ ನೀರಾವರಿ ಯಶಸ್ವಿಯಾಗಬೇಕೆಂತ ಸ್ಪೇಚ್‌ಮೆಂಟುಗಳನ್ನು ಮಾಡುತ್ತೀರ. ಆದರೆ ಸರ್ಕಾರದವರು ಯಾವ ಫೈಲ್ ಕೆಲಸವನ್ನೂ ತೆಗೆದುಕೊಳ್ಳಬಾರದೆಂದು ಒಂದು ಆದೇಶವನ್ನು ಎಲ್ಲ ಸಬ್ ಡಿವಿಜನ್ನುಗಳಿಗೂ ಕಳುಹಿಸಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ವೀರೇಂದ್ರಪಾಟೀಲ್.—ಬಹುಶಃ ಸದಸ್ಯರು ಕರೆಕ್ಷನ್ಸ್ ಮಾಡಿಕೊಂಡಹಾಗಿದೆ. ಮೈನರ್ ಇರ್ರಿಗೇಶನ್ನಿನಲ್ಲಿ 3 ಪ್ರೊಗ್ರಾಂಗಳಿವೆ; ಬರೀ restoration of tanks and construction of new tanks ಅಲ್ಲ. Sinking of irrigation wells supply of pump sets, construction and restoration of tanks ಈ ಮೂರು ಕೆಲಸಗಳೂ ಇವೆ.

Sri K. LAKKAPPA.—I have read the circular that has been sent to every Sub-Division. Yesterday I came to known that Government have sent a circular that no fresh works should be taken up under minor irrigation scheme. Is that a fact ?

Sri ALUR HANUMANTHAPPA.—Unless the works are projected works how can we take them up ?

ಶ್ರೀ ಎಸ್. ಗೋಪಾಲಗೌಡ.—ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಬಜೆಟೆಡ್ ವರ್ಕ್ಸ್ ಅಲ್ಲದಿದ್ದರೂ ತೆಗೆದುಕೊಳ್ಳುತ್ತೇವೆ ಅಂತ ಹೇಳಿದ ಆಧಾರದ ಮೇಲೆ ಈ ಸರ್ಕುಲರನ್ನು ವಾಪಸು ತೆಗೆದುಕೊಳ್ಳುತ್ತೀರ? 10 ಕೋಟಿ ರೂಪಾಯಿನ ಮೇಲೆ ಇರುವ ಎಲ್ಲಾ ಯೋಜನೆಗಳನ್ನೂ ಕೇಂದ್ರಸರಕಾರಕ್ಕೆ ವಹಿಸಿಬಿಟ್ಟು, ರಾಜ್ಯ ಸರಕಾರದವರು ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವ ಬಗ್ಗೆ ತಮ್ಮ ಹಣವನ್ನೂ ಕಾಲವನ್ನೂ ವ್ಯಯ ಮಾಡುವುದಕ್ಕೆ ಸಿದ್ಧರಿದ್ದಾರೋ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಕಾಲ ವ್ಯಯ ಮಾಡುವುದಕ್ಕೆ ಹಣ ವ್ಯಯ ಮಾಡುವುದಕ್ಕೆ ಸಿದ್ಧವಿಲ್ಲ: ಖರ್ಚು ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

Sri G.V. GOWDA.—It was said that there are 18,000 works included in the master plan. May I know whether there is any proposal to take up all the works in a phased programme? Is it not desirable to take up 10 per cent works in each taluka so that all the works may be completed in a period of 10 years?

Sri ALUR HANUMANTHAPPA.—That is in a phased programme Government intend to take up all the works.

ಶ್ರೀ ಕೆ. ಲಕ್ಕಪ್ಪ.—ಈಗಾಗಲೇ ತುಂಕೂರು, ಚಿತ್ರದುರ್ಗ, ಮತ್ತ ಕೋಲಾರ ಅಭಾವ ಪರಿಸ್ಥಿತಿ ಇರತಕ್ಕಂಥ ಪ್ರದೇಶಗಳು ಎಂದು ಸರಕಾರದ ಗಮನಕ್ಕೆ ಬಂದಿರುವುದರಿಂದ ಯಾವ ಯಾವ ಎಸ್ಟಿಮೇಟುಗಳನ್ನು ಮಾಡಿದ್ದಾರೋ, ಆ ಕೆಲಸವನ್ನು 6 ತಿಂಗಳು ಅಥವ 1 ವರ್ಷದಲ್ಲಿ ಮುಗಿಸುವುದಕ್ಕೆ ಆದೇಶ ಕೊಡುತ್ತೀರ?

Sri ALUR HANUMANTHAPPA.—Yesterday our Chief Minister assured the House that in view of the scarcity conditions prevailing in the State, the Government are very keen in taking up fresh works in addition to other scarcity works.

ಶ್ರೀ ಎಸ್. ಗೋಪಾಲ ಗೌಡ.—ಮಲೆನಾಡು ಪ್ರದೇಶದಲ್ಲಿ ಮಳೆ ಹೆಚ್ಚಾಗಿ ಬೀಳುವುದರಿಂದ ಮತ್ತೆ ಮಳೆ ನಿಂತ ನಂತರ ನೆಲಸೀದು ಹೋಗುವುದರಿಂದ ಮಲೆನಾಡಿಗೆ ಸಣ್ಣ ನೀರಾವರಿ ಯೋಜನೆ

(ಶ್ರೀ ಎಸ್. ಗೋಪಾಲ ಗೌಡ)

ಗಳನ್ನು ಯಾವ ರೀತಿ ತಯಾರಿಸಬೇಕು ಅನ್ನುವುದರ ಬಗ್ಗೆ ಏನಾದರೂ ವಿಶೇಷ ತಜ್ಞರನ್ನು ಆದಕ್ಕಾಗಿ ನೇಮಕ ಮಾಡಿ ಬೇರೆ ಯೋಜನೆಯನ್ನು ಮಾಡುತ್ತಾ ಇದ್ದೀರೊ ಅಥವ ರಾಜ್ಯದ ಬೇರೆ ಕಡೆಗಳಲ್ಲಿರು ವಂತೆ ಯೋಜನೆಯನ್ನೇ ಅನ್ವಯಿಸುತ್ತೀರೋ ?

ಶ್ರೀ ಎಸ್. ನಿಜಲಿಂಗಪ್ಪ.–ಇದು ಈಗ ನಮ್ಮ ಮುಂದಿರುವಪ್ರಶ್ನೆಯಿಂದ ಉದ್ಭವವಾಗುವುದಿಲ್ಲ. ಆದರೂ ಇದಕ್ಕೆ ಸ್ವಲ್ಪ ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ತಾವೊ ಇದಕ್ಕೆ ಅವಕಾಶ ಕೊಟ್ಟಿದ್ದೀರಿ. ಮಲೆನಾಡಿನ ಪ್ರಶ್ನೆಯೇ ಬೇರೆ. ಬೇಸಿಗೆ ನಂತರ ಮಳೆ ಇರುವುದಿಲ್ಲ, ಪೂರ್ವ ಕಾಲದಿಂದಲೂ ಅನೇಕ ಕಡೆಗಳಲ್ಲಿ ಗುಣಿಗಳನ್ನು ತೆರೆದಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ 5-6 ಎಕರೆ ವರೆಗೂ ಸಾಗು ಆಗುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಅದನ್ನು ರಿಪೇರ್ ಮಾಡುವುದಕ್ಕೆ ಸಾಧ್ಯವೆ ಅನ್ನುವು ದನ್ನು ನೋಡಿಸುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೊಸ ಕೆಲಸ ತೆಗೆದುಕೊಳ್ಳಬೇಡಿ ಅಂತ ಸರ್‌ಕ್ಯುಲರ್ ಕೊಟ್ಟಿರುವುದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೀರ; ಹಿಂದಿನ ಕೆಲಸಗಳನ್ನೆ ಕಂಟ್ರಾಕ್ಟರುಗಳು ಪೂರ್ತಿ ಸದೆ ಅನೇಕ ತೊಂದರೆಗಳಾಗಿವೆ. ಈಗ ಕ್ಷಾಮ ಪರಿಸ್ಥಿತಿ ಇರುವುದರಿಂದ, ಆ ಸರಕ್ಯುಲರನ್ನು ವಾಪಸು ತೆಗೆದುಕೊಂಡು ನಣ್ಣಪುಟ್ಟ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡು ತ್ತೀರ ?

ಶ್ರೀ ಎಸ್. ನಿಜಲಿಂಗಪ್ಪ.—ಸರಕ್ಯುಲರ್ ಏನೇನಿದೆ ಅನ್ನುವುದನ್ನು ಮಾನ್ಯ ಸದಸ್ಯರು ಊಹೆ ಮಾಡಿಕೊಂಡು ತಾವೇ ಸಮಾಧಾನ ಕೊಟ್ಟುಕೊಳ್ಳುತ್ತಿದ್ದಾರೆ. ಅದಷ್ಟು ಮಟ್ಟಿಗೆ ಕ್ಷಾಮ ಪ್ರದೇಶ ದಲ್ಲಿ ತೊಂದರೆ ಇರತಕ್ಕಂಥ ಪ್ರದೇಶಗಳಲ್ಲಿ ಹೆಚ್ಚಿಗೆ ಅನುಕೂಲ ಮಾಡಿಕೊಡಬೇಕು ಅಂತ ಅಷ್ಟು ಹೇಳಿ ದರೆ ಸಾಕಾಗುತ್ತದೆ. ಟೀಕೆ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ.

ಶ್ರೀ ಗೋಪಾಲ ಸಾರೆನ್ನ.—ಈ ನಣ್ಣ ನೀರಾವರಿ ಯೋಜನೆ ಪ್ರಕಾರ 3 ಕಾರ್ಯಕ್ರಮಗಳನ್ನು ಲೋಕೋಪಯೋಗಿ ಶಾಖೆ ನಡೆಸರು ಈಗಾಗಲೆ ಹೇಳಿದರು. ಮಲೆನಾಡಿನಲ್ಲಿ ಕೆರೆ ಅಭಾವವಿರುವು ದರಿಂದ ಆ ಸ್ಕೀಮುಗಳಿಂದ ಪ್ರಯೋಜನ ಹೊಂದಲಕ್ಕೆ ಕಷ್ಟವಾಗುತ್ತಿದೆ. ಏಕೆಂದರೆ ಇಲ್ಲಿಯ ಪರಿಸ್ಥಿತಿಯೇ ಬೇರೆ. ಅಲ್ಲಿ ನಣ್ಣ ನಣ್ಣ ಕೆನಾಲ್ಲುಗಳಲ್ಲಿ ಸಿಲ್ಟು ಬಿದ್ದು ಮುಚ್ಚಿ ಹೋಗಿ, ನೀರು ಉಪಯೋಗ ಮಾಡಲಕ್ಕೆ ಆಗುತ್ತಿಲ್ಲ. ಮಲೆನಾಡು ಪ್ರದೇಶಗಳಲ್ಲಿ, ಮುಖ್ಯವಾಗಿ ಸೌತ್ ಕೆನರಾದಲ್ಲಿ ಚಾನಲ್ಲುಗಳಿಂದ ನೀರನ್ನು ಉಪಯೋಗ ಮಾಡಿಕೊಳ್ಳಲಕ್ಕೆ ಕಷ್ಟವಾಗುವುದರಿಂದ ಚಾನಲ್ ದಿಸಿಲ್ಟಿಂಗಿಗೆ ಸರಕ್ಯುಲರ್ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಹೇಳುವುದನ್ನು ತಿಳಿದುಕೊಳ್ಳುವುದಕ್ಕೇ ನನಗೆ ಕಷ್ಟವಾ ಗಿದೆ. ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಏನು ಎಂದು ಹೇಳಿದರೆ, ಖಂಡಿತ ಅತ್ಯಂತ ಸಹಾನುಭೂತಿಯಿಂದ ವಿಚಾರ ಮಾಡುತ್ತೇನೆ.

Sri C. J. MUCKANNAPPA.—In view of the fall in food production do Government consider spending the money that they wanted to spend within 5 years, within a period of 2 years only and see that there is increase in food production by means of minor irrigation?

Sri S. NIJALINGAPPA.—What was provided has already been spent and we are now asking the Central Government to give us more money. Immediately it becomes available, we will spend it to the fullest possible benefit.

---

12-30 P.M.

## Amount spent in respect of the Scheme for the Construction of the Malaprabha Dam.

*Q.—670, Sri A. J. DODDAMETI (Ron).—

Will the Government be pleased to state :—

(*a*) the amount spent in respect of the scheme for the construction of the Malaprabha Dam, till the end of 1963-64 ;